# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 776(765) |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 20-09-2022 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸ್ಮಾರ್ಟ್ ಸಿಟಿ ಯೋಜನೆಯನ್ನು ರಾಜ್ಯದ ಯಾವ ಯಾವ ನಗರಗಳಲ್ಲಿ ಅನುಷ್ಠಾನಗೊಳಿಸಲಾಗಿದೆ; | ಕೇಂದ್ರ ಹಾಗೂ ರಾಜ್ಯ ಪ್ರಾಯೋಜಿತ ಸ್ಮಾರ್ಟ್ ಸಿಟಿ ಅಭಿಯಾನದಡಿ ರಾಜ್ಯದಿಂದ ಈ ಕೆಳಗಿನ 7 ನಗರಗಳು ಆಯ್ಕೆಯಾಗಿರುತ್ತವೆ.<br><br>1) ಬೆಳಗಾವಿ 2) ದಾವಣಗೆರೆ 3) ಹುಬ್ಬಳ್ಳಿ-ಧಾರವಾಡ 4) ಮಂಗಳೂರು 5) ಶಿವಮೊಗ್ಗ 6) ತುಮಕೂರು ಮತ್ತು 7) ಬೆಂಗಳೂರು |
| ಆ) | ಸ್ಮಾರ್ಟ್ ಸಿಟಿ ಯೋಜನೆಯು ಪ್ರಾರಂಭಗೊಂಡಿದ್ದು, ಯಾವಾಗ; ಸದರಿ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ; | ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯವು, ದಿನಾಂಕ:25-06-2015 ರಂದು ಸ್ಮಾರ್ಟ್ ಸಿಟಿ ಅಭಿಯಾನಕ್ಕೆ ಚಾಲನೆ ನೀಡಿರುತ್ತದೆ.<br><br>ಅಭಿಯಾನದ ಅವಧಿಯು 5 ಆರ್ಥಿಕ ವರ್ಷಗಳಾಗಿದ್ದು, 2020 ಹಾಗೂ 2021ನೇ ಸಾಲಿನಲ್ಲಿ ಕೋವಿಡ್-19 ಸಾಂಕ್ರಮಿಕ ರೋಗದಿಂದ ವಿಧಿಸಲಾಗಿದ್ದ ಲಾಕ್ ಡೌನ್ ಹಾಗೂ ಕೆಲಸಗಾರರ ಕೊರತೆಯನ್ನು ಪರಿಗಣಿಸಿ ಕೇಂದ್ರ ನಗರಾಭಿವೃದ್ಧಿ ಸಚಿವಾಲಯವು ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನದ ಅವಧಿಯ ಕಾಲಮಿತಿಯನ್ನು ಜೂನ್-2023 ರವರೆಗೆ ವಿಸ್ತರಿಸಿರುತ್ತದೆ.<br><br>ಅದರಂತೆ ರಾಜ್ಯದ ಎಲ್ಲಾ 7 ಸ್ಮಾರ್ಟ್ ಸಿಟಿಗಳಿಗೆ ತಿಂಗಳವಾರು ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ನಿಗಧಿಪಡಿಸಿದ್ದು, ಜೂನ್-2023 ಪೂರ್ವದಲ್ಲಿಯೇ ಬಾಕಿ ಇರುವ 295 ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. |
| ಇ) | ಈ ಯೋಜನೆಯಡಿಯಲ್ಲಿನ ಕೆಲವು ಕಾಮಗಾರಿಗಳನ್ನು ಅನುಷ್ಠಾನಗೊಳಿಸದಿರುವುದು/ ಟೆಂಡರ್ ಕರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು; | ಸ್ಮಾರ್ಟ್ ಸಿಟಿ ಪ್ರಸ್ತಾವನೆಯಲ್ಲಿದ್ದ ಯೋಜನೆಗಳಿಗೆ ಆಯಾ ನಗರಗಳು ಡಿ.ಪಿ.ಆರ್ ತಯಾರಿಸಿ ಅನುಷ್ಠಾನಗೊಳಿಸುತ್ತಿವೆ. ಕೆಲವು ಕಾಮಗಾರಿಗಳು ತಾಂತ್ರಿಕವಾಗಿ ಕಾರ್ಯಸಾಧುವಲ್ಲದ ಕಾರಣ ಅಂತಹ ಕಾಮಗಾರಿಗಳನ್ನು ಕೈಬಿಟ್ಟು ಪರ್ಯಾಯ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.<br><br>ಮುಂದುವರೆದು, ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿನ ಎಲ್ಲಾ ಕಾಮಗಾರಿಗಳನ್ನು ಟೆಂಡರ್ ಪ್ರಕ್ರಿಯೆ ಅನುಸರಿಸಿದ ನಂತರವಷ್ಟೇ ಅನುಷ್ಠಾನಗೊಳಿಸಲಾಗುತ್ತಿದೆ. |

ಸ್ಮಾರ್ಟ್ ಸಿಟಿ ಅನುದಾನದಡಿ ಹಾಗೂ ಪಿಪಿಪಿ ಮಾದರಿಯಡಿ ನಗರಗಳಲ್ಲಿ ಕೈಗೊಂಡಿರುವ ಒಟ್ಟು ಕಾಮಗಾರಿಗಳು ಹಾಗೂ ಅವುಗಳ ಪ್ರಸ್ತುತ ಹಂತದ ವಿವರ ಈ ಕೆಳಕಂಡಂತಿದೆ:

(ರೂ. ಕೋಟಿಗಳಲ್ಲಿ)

| ನಗರ | ಒಟ್ಟು ಕಾಮಗಾರಿ | | ಮುಕ್ತಾಯಗೊಂಡ ಕಾಮಗಾರಿ | | ಪ್ರಗತಿಯಲ್ಲಿರುವ ಕಾಮಗಾರಿ | | ಟೆಂಡರ್ ಹಂತದ ಕಾಮಗಾರಿ | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಬೆಳಗಾವಿ | 109 | 1141.06 | 65 | 375.96 | 44 | 765.10 | 0 | 0 |
| ದಾವಣಗೆರೆ | 115 | 1005.99 | 75 | 446.78 | 40 | 559.21 | 0 | 0 |
| ಹುಬ್ಬಳ್ಳಿ-ಧಾರವಾಡ | 64 | 979.97 | 49 | 370.7 | 15 | 609.27 | 0 | 0 |
| ಮಂಗಳೂರು | 63 | 1402.81 | 22 | 106.59 | 40 | 1096.22 | 1 | 200.00 |
| ಶಿವಮೊಗ್ಗ | 74 | 1145.44 | 49 | 454.87 | 24 | 550.47 | 1 | 140.1 |
| ತುಮಕೂರು | 185 | 1282.60 | 139 | 679.35 | 46 | 603.25 | 0 | 0 |
| ಬೆಂಗಳೂರು | 47 | 934.11 | 13 | 85.53 | 34 | 848.58 | 0 | 0 |
| **ಒಟ್ಟು** | **657** | **7891.98** | **412** | **2519.78** | **243** | **5032.10** | **2** | **340.10** |

ಮೇಲೆ ವಿವರಿಸಿದಂತೆ ಪ್ರಸ್ತುತ 02 ಕಾಮಗಾರಿಗಳಷ್ಟೇ ಟೆಂಡರ್ ಹಂತದಲ್ಲಿ ಇರುತ್ತವೆ. ಸದರಿ ಕಾಮಗಾರಿಗಳು ಪಿಪಿಪಿ ಕಾಮಗಾರಿಗಳಾಗಿದ್ದು, ಸ್ಮಾರ್ಟ್ ಸಿಟಿ ಅನುದಾನದ ಮೇಲೆ ಅವಲಂಬಿತವಾಗಿರುವಿದಿಲ್ಲ.ಮುಂದುವರೆದು, ಪ್ರಸ್ತುತ ಸ್ಮಾರ್ಟ್ ಸಿಟಿ ಯೋಜನೆಯಡಿ ಯಾವುದೇ ಕಾಮಗಾರಿಗಳು ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ಹಂತದಲ್ಲಿ ಇರುವುದಿಲ್ಲ.

ಈ) ಸದರಿ ಯೋಜನೆಗೆ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಪಾಲೆಷ್ಟು; ಬಿಡುಗಡೆಯಾದ ಅನುದಾನವೆಷ್ಟು; (ನಗರವಾರು ಅಂಕಿ ಅಂಶ ನೀಡುವುದು)

ಸ್ಮಾರ್ಟ್ ಸಿಟಿ ಅಭಿಯಾನದಡಿ ಆಯ್ಕೆಯಾದ ಪ್ರತಿ ನಗರಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಶೇ. 50:50 ಅನುಪಾತದ ಮೇಲೆ ತಲಾ ರೂ.500.00 ಕೋಟಿಯಂತೆ, ಒಟ್ಟು ರೂ.1000.00 ಕೋಟಿ ಅನುದಾನ ಮೀಸಲಿರಿಸಲಾಗಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನಗರಗಳಿಗೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.

**(ರೂ. ಕೋಟಿಗಳಲ್ಲಿ)**

| ನಗರ | ಕೇಂದ್ರ | ರಾಜ್ಯ | ಒಟ್ಟು |
|---|---|---|---|
| ಬೆಳಗಾವಿ | 441.00 | 415.00 | 856.00 |
| ದಾವಣಗೆರೆ | 392.00 | 415.00 | 807.00 |
| ಹುಬ್ಬಳ್ಳಿ-ಧಾರವಾಡ | 343.00 | 414.00 | 757.00 |
| ಮಂಗಳೂರು | 343.00 | 414.00 | 757.00 |
| ಶಿವಮೊಗ್ಗ | 403.91 | 414.00 | 817.91 |
| ತುಮಕೂರು | 441.00 | 414.00 | 855.00 |
| ಬೆಂಗಳೂರು | 441.00 | 414.00 | 855.00 |
| **ಒಟ್ಟು** | **2704.91** | **2900.00** | **5604.91** |

ಉ) ಬಿಡುಗಡೆಯಾದ ಅನುದಾನವನ್ನು ಯಾವ ಯಾವ ಯೋಜನೆಗಳಿಗೆ ವ್ಯಯ ಮಾಡಲಾಗಿದೆ?

ಸ್ಮಾರ್ಟ್ ಸಿಟಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಒಟ್ಟು ರೂ.2704.91 ಕೋಟಿ ಹಾಗೂ ರಾಜ್ಯ ಸರ್ಕಾರದಿಂದ ರೂ.2900.00 ಕೋಟಿಯಂತೆ ಒಟ್ಟು ರೂ.5604.91 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.

ಪ್ರತಿ ನಗರದಲ್ಲಿ ರೂ.930.00 ಕೋಟಿ ಯೋಜನಾ ಮೊತ್ತಕ್ಕೆ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದ್ದು, ನಗರವಾರು ಆರ್ಥಿಕ ಪ್ರಗತಿಯ ವಿವರ ಈ ಕೆಳಗಿನಂತಿದೆ.

**(ರೂ. ಕೋಟಿಗಳಲ್ಲಿ)**

| ನಗರ | ಆರ್ಥಿಕ ಪ್ರಗತಿ |
|---|---|
| ಬೆಳಗಾವಿ | 751.12 |
| ದಾವಣಗೆರೆ | 678.98 |
| ಹುಬ್ಬಳ್ಳಿ-ಧಾರವಾಡ | 596.14 |
| ಮಂಗಳೂರು | 542.30 |
| ಶಿವಮೊಗ್ಗ | 738.14 |
| ತುಮಕೂರು | 750.52 |
| ಬೆಂಗಳೂರು | 670.11 |
| **ಒಟ್ಟು** | **4727.31** |

ಸಂಖ್ಯೆ:ನಅಇ 148 ಸಿಎಸ್‌ಎಸ್ 2022

**(ಬಿ.ಎ.ಬಸವರಾಜ)**
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು